(*e*) As per the agreement executed with the firm and as per Tender schedule and conditions, the supply of steel plates is with the Board.

(*f*) Compensation Clauses provide for all types of delays on both sides, including delay of steel.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರದ ಪಾಟರು ನಪ್ಲೈ ವಿಚಾರ ಬಹು ಮುಖ್ಯ ವಾದ ವಿಚಾರವಾಗಿದೆ ಎಂದು ಇಲ್ಲ ನಾನು ಮೊದಲು ಪ್ರಶ್ನೆ ಕಳುಹಿಸಿದ್ದೆ. ಆದರೆ ಇದರ ಬಗ್ಗೆ ನನಗೆ 59 ನೇ ಸೆಕ್ಷೆನ್ ಪ್ರಕಾರ ಹೆಚ್ಚು ಮಾತನಾಡಲು ಅಧ್ಯಕ್ಷರು ಒಂದು ಅವಕಾಶವನ್ನು ಕೊಟ್ಟಿರುವುದರಿಂದ ನಾನು ಈಗ ನನ್ನ ಉಪಪ್ರಶ್ನೆಗಳನ್ನು ಹಾಕುವುದಿಲ್ಲ.

Mr. SPEAKER.—An adjournment motion had been tabled on this subject. It was subsequently converted into a motion under rule 59 by Sri C. K. Rajaiah Setty and Sri M. S. Krishnan. I gave them an assurance that I shall allot time for this at the end of the day's business at 6 P.M. or earlier, if the day's business is over. In view of that, hon. Member is not putting his question.

Sri H. SIDDAVEERAPPA.—Can there be any conditional withdrawal of the qustion by an hon. Member.

Mr. SPEAKER.—I am not putting any condition. He is thinking in his own way. There is no condition. But I have permitted the subject to be taken up at 6 P.M.

Tour of the Minister of State for Fisheries and Ports

81. **Sri B. BHASKAR SHETTY** (Kaup).—

Will the Chief Minister be pleased to state:—

(*a*) the number of days and districts in which the Minister of State for Fisheries and Ports had toured in a month so far, after assuming the Office of the Minister ;

(*b*) the period of his tour outside the State and in foreign countries and when ;

(*c*) the amount of D.A., T.A. and other allowances claimed by him during the said tour ?

Sri RAMAKRISANA HEGDE (Minister for Finance, Planning and Youth Welfare) [On behalf of SRI VEERENDRA PATIL (Chief Minister)].—

(*a*) *Vide* annexure (A) appended.

(*b*) *Vide* annexure (B) appended.

(*c*) T.A Rs. 22,422-60 for two years. (Rs. 15,200 foreign tour expenditure). D.A. Rs. 4,330-00

(SRI RAMAKRISHNA HEGDE)

ANNEXURE—A

Months	S. K. Dt	Tumkur	Bangalore	Kolar	Bellary	Chitradurga	Mandya	Bidar	Hassan	Mysore	Shimoga	Coorg.	N. K. Dt.
June 68	6	...	...	3	...	...	...	...	...	...	...	...	...
July 68	3	...	...	6	3	3	...	...	1	...	...	...	...
August 68	...	...	1	3	1	...	...	3	...	...	...	...	...
September 68	...	...	...	6	...	...	...	...	...	1	...	...	...
October 68	...	...	...	4	...	...	...	...	...	2	1	2	4
November 68	...	...	...	2	...	...	...	...	...	...	...	...	...
December 68	...	3	2	6	...	...	...	...	...	...	...	...	...
January 69	3	...	...	2	...	...	3	...	...	...	...	...	...
February 69	5	...	1	2	...	...	...	...	...	...	...	...	3
March 69	2	...	...	1	..	...	...	...	...	...	2	...	...
April 69	...	...	1	2	...	...	...	...	...	...	...	...	4
May 69	...	...	...	...	...	...	...	...	...	...	...	...	...
June 69	...	...	...	...	...	...	...	...	...	...	...	...	...
July 69	...	...	...	2	...	...	2	...	...	4	...	...	...
August 69	4	...	...	3	...	...	...	...	...	...	...	...	...
September 69	...	...	1	2	3	3	...	...	...	...	...	...	...
October 69	...	...	...	4	2	...	...	1	...	3	...	...	...
November 69	4	2	1	2	...	...	...	...	...	...	1	...	...
December 69	...	2	...	3	...	...	...	...	2	...	...	...	...
January 70	4	2	...	1	...	...	...	...	...	...	...	...	3
February 70	3	...	...	1	1	1	...	...	...	...	...	...	2

Months.	Raichur	Dharwar,	Gulbarga	Bijapur.
September 69	2	...	...	...
October 69	...	2	2	1
February 70	...	2	...	...

ANNEXURE—B

Months	*Days*
August 1968	5 days New Delhi.
January 1969	2 days Bombay.
April 1969	4 days Cochin and Ernakulam.
January 1970	4 days-2 days Delhi and 2 days Bhuba eswar.
May and June 1969	38 days Tour in United Kingdoms.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೀನುಗಾರಿಕೆ ಮಂತ್ರಿಗಳು ಎರಡು ವರ್ಷದಲ್ಲಿ ಸುಮಾರು 218 ದಿವಸಗಳು ಟೂರು ಮಾಡಿ 41.952 ರೂಪಾಯಿಗಳನ್ನು ಟಿ.ಎ. ಮತ್ತು ಡಿ.ಎ. ಎಂದು ಪಡೆದಿದ್ದಾರೆ. ನಮ್ಮ ಮಂತ್ರಿಮಂಡಲದಲ್ಲಿ ಒಬ್ಬ ಮಂತ್ರಿಗಳು ಒಂದು ತಿಂಗಳಿಗೆ ಹತ್ತು ದಿನಗಳ ಮೇಲೆ ಟೂರು ಮಾಡಕೂಡದು ಎಂದು ನಿಯಮ ಇದ್ದರೂ ಈ ಮಂತ್ರಿಗಳಿಗೆ ಮಾತ್ರ ಹೆಚ್ಚು ಟೂರು ಮಾಡಲು ಲೈಸನ್ಸ್ ಏನಾದರೂ ಕೊಟ್ಟಿದ್ದಿರಾ ? ಇದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಸಾಮಾನ್ಯವಾಗಿ ಮಂತ್ರಿಗಳು ಒಂದು ತಿಂಗಳಲ್ಲಿ ಹತ್ತು ದಿನಗಳಿಗೆ ಹೆಚ್ಚಾಗದಂತೆ ಟೂರು ಮಾಡಬೇಕೆಂದು ಇದೆ ಮತ್ತು ಇದರಂತೆ ಇಲ್ಲಿನ ಮಂತ್ರಿಗಳು ಈ ನಿಯಮವನ್ನು ಅನುಸರಿಸಬೇಕೆಂದು ಒಂದು ಪರಿಪಾಠ ಮಾಡಿಕೊಂಡಿದ್ದಾರೆ. ಆದರೆ ಈ ಮಂತ್ರಿಗಳು ಮೀನುಗಾರಿಕೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಸಾರಿ ಹೋಗಿ ಬರಬೇಕಾಗಿ ಬಂದುದರಿಂದ ಸ್ವಲ್ಪ ಹೆಚ್ಚು ಟೂರುಗಳಾಗಿವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಮಂತ್ರಿಗಳು ಪ್ರವಾಸ ಮಾಡುವಾಗ ಕಲ್ಲು ಹಾಕುವುದು ಹಾಗೂ ಇನ್ನಿತರ ಒಪನಿಂಗು ಸೆರೆಮೊನಿಯಲ್ಲಿ ಹೆಚ್ಚು ಆಸಕ್ತಿ ವಹಿಸಿರುವುದರಿಂದ, ಮಂತ್ರಿಮಂಡಲದಲ್ಲಿ ಇವರನ್ನು ಪ್ರತ್ಯೇಕವಾಗಿ ಟೂರಿಂಗು ಮಿನಿಸ್ಟರಾಗಿಯೇ ಏಕೆ ಮಾಡಬಾರದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಪ್ರತ್ಯೇಕವಾಗಿ ಟೂರಿಂಗು ಮಂತ್ರಿಗಳಾಗಿ ಮಾಡುವ ಅಗತ್ಯ ವೇನೂ ಇಲ್ಲ.

ಶ್ರೀ ಬೋಳಾ ರಘುರಾಮಶೆಟ್ಟಿ.—1968ನೇ ಜೂನ್ ತಿಂಗಳಲ್ಲಿ ಮಾನ್ಯ ಮೀನುಗಾರಿಕೆ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಆರು ಸಾರಿ ಹೋಗಬೇಕಾಗಿ ಬರಲು ಇದ್ದಂತಹ ವಿಶೇಷ ಕೆಲಸವಾದರೂ ಏನಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಕೆಲಸ ಬಹಳ ಜೋರಿನಿಂದ ನಡೆಯುತ್ತಿದೆ. ಇದನ್ನು ಹೋಗಿ ನೋಡಿಕೊಂಡು ಬರಬೇಕಾಗಿತ್ತು ಎಂದು ಆಗಾಗ್ಗೆ ಸ್ವತಃ ಇಲ್ಲಿನ ಕೆಲಸಗಳನ್ನು ನೋಡುವ ಅಗತ್ಯ ಇತ್ತು ಎಂದು ಕಾಣುತ್ತೆ. ಇದರಿಂದ ಹೋಗಿರಬಹುದು.

1-30 P.M.

ಶ್ರೀ ಎಸ್. ಎಂ. ಗುರೆಡ್ಡಿ.—ತಿಂಗಳಲ್ಲಿ ಹತ್ತು ದಿನಗಳಿಗಿಂತ ಯಾವ ಮಂತ್ರಿಯೂ ಹೆಚ್ಚು ದಿನಗಳು ಟೂರ್ ಮಾಡಬಾರದೆಂಬ ನಿಯಮವಿದ್ದರೂ, ಈಗ ಎಲ್ಲಾ ಜಿಲ್ಲೆಗಳಲ್ಲೂ ಕಚ್ಚೆಗಳಾಗಿರುವುದರಿಂದ ಅಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಮಾಡಲು ಇವರಿಗೆ ಹೆಚ್ಚು ದಿನಗಳ ಟೂರಿನ ಅವಶ್ಯ ಕತೆಯಿದೆ ಅಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮುಖ್ಯವಾಗಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಇವರು ಪ್ರವಾಸಮಾಡುವ ಹೆಚ್ಚಿನ ಅಗತ್ಯವನ್ನು ಹೊಂದಿದ್ದರೂ, ಇವರು ಇತರ ಜಿಲ್ಲೆಗಳಲ್ಲೂ ಮೀನುಗಾರಿಕೆಯ ಅಭಿವೃದ್ಧಿಯ ದೃಷ್ಟಿಯಿಂದ ಹೋಗಲೇಬೇಕಾಗುವುದು. ಆದ್ದರಿಂದ ಅವರು ಎಲ್ಲ ಜಿಲ್ಲೆಗಳಲ್ಲೂ ಟೂರ್ ಮಾಡಿದ್ದಾರೆ.

ಶ್ರೀ ಎಚ್. ಬಿ. ಜ್ಯಾರಾನಯ್ಯ.—ಇವರು ಟೂರ್ ಹೋಗತಕ್ಕ ಕಡೆ ಜನರೇ ಸೇರುವುದಿಲ್ಲ ಎಂದು ಇವರು ಆ ಸ್ಥಳೀಯ ಅಧಿಕಾರಿಗಳನ್ನು ಇವರ ಟೂರಿನ ಅವಧಿಯಲ್ಲಿ ಇವರ ಜೊತೆಯಲ್ಲಿ ಕಡ್ಡಾಯವಾಗಿರಬೇಕೆಂದೂ ಹಾಗೆ ಇಲ್ಲದಿದ್ದವರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಇವರು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಬರೆದಿವ್ವಾರೆಂಬುದು ನಿಜವೇ ?

ಶ್ರೀ ರಾಮಕೃಷ್ಣ ಹೆಗಡೆ.—ನಿಜವಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರ ಜಿಲ್ಲೆಯಲ್ಲಿ ವರ್ಷದಲ್ಲಿ ಯಾವಾಗಲೂ ನೀರೇ ಇರುವುದಿಲ್ಲ. ಆದ್ದರಿಂದ ಅಲ್ಲಿ ಮೀನುಗಾರಿಕೆಯೂ ಇಲ್ಲ. ಹಾಗಿದ್ದರೂ ಒಬ್ಬ ಮಂತ್ರಿಗಳು ತಿಂಗಳಿಗೆ 4—5 ಸಾವಿರ ರೂಪಾಯಿಗಳ ದಿನಭತ್ಯ ಮಾಡುತ್ತಿದ್ದರೆ ರಾಜ್ಯದಲ್ಲಿರತಕ್ಕ ಬಡ ರೈತರ ಗತಿಯೇನಾಗಬೇಕು ? ಹೀಗೆ ವಿಪರೀತ ಹಣವನ್ನು ಖರ್ಚುಮಾಡುತ್ತಿರುವ ಮಂತ್ರಿಗಳನ್ನು ಮುಖ್ಯ ಮಂತ್ರಿಗಳು ತೆಗೆದು ಹಾಕಿದರೆ ದೇಶಕ್ಕೆ ಅನುಕೂಲವಾಗುತ್ತದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಮುಖ್ಯ ಮಂತ್ರಿಗಳು ಗಮನಿಸುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಮಂತ್ರಿಗಳು 15 ದಿನಗಟ್ಟಲೆ ಕೋರಾರದ ಪ್ರವಾಸಿಗರ ಮಂದಿರದಲ್ಲಿ ಉಳಿದುಕೊಂಡು ಅಲ್ಲಿ ರಾಜಕೀಯ ಮಾಡುತ್ತಿರುವುದೂ ಮತ್ತು ಇವರು ಖಾಸಗೀ ಕೆಲಸಗಳಿಗೆ ಸರ್ಕಾರಿ ಕಾರನ್ನು ಉಪಯೋಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕೆಲವು ಮಂತ್ರಿಗಳು ಮಿತಿಗಿಂತ ಹೆಚ್ಚಿಗೆ ಪ್ರವಾಸಮಾಡುವುದು ಇನ್ನು ಕೆಲವು ಮಂತ್ರಿಗಳು ಪ್ರವಾಸವನ್ನೇ ಮಾಡದಿರುವುದು ಸರಿಯಾದುದಲ್ಲ, ಆದುದರಿಂದ ಇದನ್ನು ಸರಿಪಡಿಸಲು ಈ ವಿಚಾರದಲ್ಲಿ ಸರ್ಕಾರದವರು ಎಲ್ಲ ಮಂತ್ರಿಗಳೂ ಇಂತಿಷ್ಟು ದಿನ ಟೂರ್ ಮಾಡಲೇಬೇಕೆಂದು ಒಂದು ಸೂಕ್ತ ಆಜ್ಞೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ಒಂದು ಸರ್ಕಾರಿ ಆಜ್ಞೆಯನ್ನು ಮಾಡುವುದು ಸೂಕ್ತವೂ ಅಲ್ಲ ಸಾಧುವಾದ್ದೂ ಅಲ್ಲ. ಎಲ್ಲ ಮಂತ್ರಿಗಳೂ ಇಂತಿಷ್ಟೇ ದಿನ ಟೂರ್‌ಮಾಡಬೇಕೆಂಬ ನಿಯಮವನ್ನು ಮಾಡುವುದನ್ನು ಆಯಾಯ ಮಂತ್ರಿಗಳ ವಿವೇಚನೆಗೆ ಬಿಡುವುದು ಒಳ್ಳೆಯದೆಂದು ಹೇಳುತ್ತೇನೆ ಕೆಲವು ಮಂತ್ರಿಗಳು ಜನರ ದೂರು ದುಮ್ಮಾನಗಳನ್ನು ಸ್ವತಃ ಕೇಳುವುದಕ್ಕಾಗಿ ಟೂರ್ ಮಾಡಲೇ ಬೇಕಾಗುವುದು. ಅಂಥವರು ಟೂರ್ ಹೋಗಿಯೇ ಹೋಗುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಕಾಂಗ್ರೆಸ್ (ಓ) ಅಧ್ಯಕ್ಷರ ಜೊತೆಯಲ್ಲಿ 4–5 ಜನ ಮಂತ್ರಿಗಳು ಟೂರ್ ಮಾಡಿರುವಕ್ಕೆ ವಿಚಾರದಲ್ಲಿ ಇವರೆಲ್ಲರೂ ತಮ್ಮ ಪಾರ್ಟಿಫಂಕ್ಷನ್ನಿಗೆ ಅಂಟೆಂಡ್ ಮಾಡಿರುವ ಕಾರಣ ಆ ಮಂತ್ರಿಗಳು ಆ ದಿನದಲ್ಲಿ ಟಿ.ಎ. ಮತ್ತು ಡಿ.ಎ.ಗಳನ್ನು ಡ್ರಾ ಮಾಡಿದ್ದಾರೆಯೇ ಅಥವಾ ಇಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ. – ಅವಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರವನ್ನು ಒದಗಿಸಲಾಗುತ್ತೆ.

ಶ್ರೀ ಎಸ್. ಎ. ಅಗ್ನಿಹೋತ್ರಿ.— ಮಿನಾನುಗಾರಿಕೆ ಮಂತ್ರಿಗಳು ಬಹಳ ದಿನಗಳಕಾಲ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿರುವುದರಿಂದ ಪಾಶ್ಚಿಮಾತ್ಯ ರಾಷ್ಟ್ರದ ಮೀನುಗಳು ಬಹಳವಾಗಿ ಇಲ್ಲಿಗೂ ಬಂದಿರಬಹುದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಸಮುದ್ರದ ಅಂತರಾಳದಲ್ಲಿ ಬಂದಿದ್ದರೂ ಬಂದಿರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ನಿಜಲಿಂಗಪ್ಪನವರ ಜೊತೆಯಲ್ಲಿ ಖಚಿತವಾಗಿ ಎಷ್ಟು ಜನ ಮಂತ್ರಿಗಳು ಪ್ರವಾಸ ಮಾಡಿದರು ? ಆ ಕಾಲದಲ್ಲಿ ಅವರು ಸರ್ಕಾರಿ ಕಾರುಗಳನ್ನು ಉಪಯೋಗ ಮಾಡಿರಲಿಲ್ಲವೆ? ಮತ್ತು ಅವರು ಟಿ.ಎ ಮತ್ತು ಡಿ.ಎ. ಎಷ್ಟನ್ನು ಡ್ರಾ ಮಾಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಜೊತೆಯಲ್ಲಿ ಟೂರ್ ಮಾಡಿದ ಮಂತ್ರಿಗಳ ಸಂಖ್ಯೆ ಬಹಳ ವಿರಳ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಾಮಾನ್ಯನಾಗಿ ಎಷ್ಟು ದಿವಸಗಳು ಪ್ರವಾಸ ಮಾಡಿದ್ದಾರೆ ಮತ್ತು ಎಷ್ಟು ಟಿ.ಎ. ಡಿ.ಎ. ತೆಗೆದುಕೊಂಡಿದ್ದಾರೆಂಬುದನ್ನು ಖಚಿತವಾಗಿ ತಿಳಿಸಲು ಸಾಧ್ಯವಿಲ್ಲವೇ ?

Sri RAMAKRISHNA HEGDE.—I was saying that whenever any Minister goes with the Congress President for party work he does not claim any T.A. or D.A. It has been the principle which has been in practice throughout.

ಶ್ರೀ ಜಿ. ನಾರಾಯಣಗೌಡ.—ಕೆಲವು ಮಂತ್ರಿಗಳು ತಿಂಗಳಲ್ಲಿ 20–25 ದಿನಗಳು ಟೂರ್ ಮಾಡುತ್ತಿರುವುದರಿಂದ ಅಂಥವರ ಟಿ.ಎ. ಡಿ.ಎ. 10 ದಿನಕ್ಕೆ ಮೇಲ್ಪಟ್ಟಿದ್ದನ್ನು ಡಿಸ್‌ಅಲೌವಾಡು ವಂತೆ ಎ.ಜಿ.ಗೆ ತಿಳಿಸುವುದಕ್ಕಾಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—10 ದಿನಗಳಿಗೂ ಮೇಲ್ಪಟ್ಟು ಕೆಲವು ಮಂತ್ರಿಗಳು ಪ್ರವಾಸ ಮಾಡಲೇಬೇಕಾಗುತ್ತದೆ. ಹಾಗೆ ನಿರ್ಬಂಧ ಮಾಡುವುದಕ್ಕಾಗುವುದಿಲ್ಲ.

Sri A. R. BADARI NARAYAN.—It is seen from Annexure 'A' that the Minister has toured for 60 days in Kolar, one day in Bijapur, two days in Raichur and 2 days in Gulbarga. Why is it Kolar has been discriminated as against other districts ?

Sri RAMAKRISHNA HEGDE.—There is no question of discrimination. It is not a question of equal distirbution of tours.

Wherever the Minister finds it necessity to go, he will tour.

ಶ್ರೀ ಜಿ. ದುಗಪ್ಪ.—ಸ್ವಾಮಿ, ಈ ಮಂತ್ರಿಗಳು ಬಹಳ ಕಷ್ಟಪಟ್ಟುಕೊಂಡು ಕಾಂಗ್ರೆಸ್ ಅಧ್ಯಕ್ಷರ ಜೊತೆಯಲ್ಲಿ ಸದಸ್ಯರನ್ನು ಎನ್‌ರೋಲ್ ಮಾಡುವುದಕ್ಕೆ ರಿಜಿಸ್ಟರುಗಳನ್ನು ಹೊತ್ತುಕೊಂಡು ಹೋಗುತ್ತಿದ್ದರೆಂದು ಜನರೆನ್ನುತ್ತಾರೆ. ನಿಜವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿಜವಲ್ಲ.

Improvement of Arasikere-Maganahalli Road

113. Sri B. H. YANKA NAIK (Harapanahalli).—

Will the Minister for Public Works be pleased to state :—

(*a*) whether it is a fact that Arasikere-Maganahalli road (passing through Thawdur Kavalahalli, Kanchikere and Suttur) was taken over by Government of India in 1951–52 ;

(*b*) if so, the amount spent so far on the said road ;

(*c*) whether they have any programme to improve the said road ?

Sri BASAVARAJ MAGAVI (Deputy Minister for Public Works).—

(*a*) No.

(*b*) Does not arise in view of reply to clause (*a*) above.

(*c*) Will be considered subject to availability of funds.

ಶ್ರೀ ಬಿ. ಎಚ್. ಯಂಕನಾಯಕ್.—ಸ್ವಾಮಿ, ಸರ್ಕಾರದವರು ಇಲ್ಲಿ ಮೆಟಲ್ ಹಾಕಿಸುವುದಕ್ಕೆ 3-4 ಲಕ್ಷ ರೂಪಾಯಿ ಖರ್ಚು ಮಾಡಿರುವುದು ನಿಜವೇ, ಸುಳ್ಳೇ ?

ಶ್ರೀ ಬಸವರಾಜ ಮಾಗಾವಿ.—ಹೌದು. ಇದುವರೆಗೆ 3.15 ಲಕ್ಷ ರೂಪಾಯಿಗಳು ಇದುವರೆಗೆ ಖರ್ಚು ಮಾಡಿದ್ದೇವೆ.

ಶ್ರೀ ಬಿ. ಎಚ್. ಯಂಕನಾಯಕ್.—ಏತಕ್ಕಾಗಿ ಇಷ್ಟು ಹಣ ಖರ್ಚು ಮಾಡಿದ್ದೀರಿ ?

ಶ್ರೀ ಬಸವರಾಜ ಮಾಗಾವಿ.—ಈ ರಸ್ತೆಯನ್ನು 2 ಸೆಕ್ಷನ್‌ಗಳಾಗಿ ವಿಂಗಡಿಸಿ ಮೊದಲನೆ ಸೆಕ್ಷನ್ ದಾವಣಗೆರೆಯಿಂದ ಮಾಗಲಹಳ್ಳಿಗೆ ಆ ರಸ್ತೆ, ಮೇಲೆ ಒಟ್ಟು 5 ಮೈಲಿ 4 ಫರ್ಲಾಂಗ್‌ಗೆ 3.15 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಒಟ್ಟು ಆ ಕೆಲಸಗಳಿಗೆ 5.15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಅಂದಾಜು ಇಟ್ಟುಕೊಂಡಿದ್ದೇವೆ.